ಶ್ರೀ ಹೆಚ್. ಏಕಾಂತಯ್ಯ: ಒಂದು ಪ್ರಮುಖವಾದ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಅನುಮತಿ ಕೊಟ್ಟದ್ದಕ್ಕೆ ವಂದಿಸುತ್ತೇನೆ ಆದು ಇವತ್ತಿನ ದಿವಸ ಪತ್ರಿಕೆಗಳಲ್ಲಿ ಕೂಡ ಬಂದಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ವೈದ್ಯ ಸಿಬ್ಬಂದಿ ಕಳೆದ ಹಲವಾರು ದಿನಗಳಿಂದ ಶಸ್ತ್ರ ಚಿಕಿತ್ಸೆಯನ್ನು ರದ್ದುಪಡಿಸಿದ್ದಾರೆ.

ಅಧ್ಯಕ್ಷರು: ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ, ನಾಳೆ ತೆಗೆದುಕೊಳ್ಳೋಣ

ಶ್ರೀ ಎಂ. ವೀರಪ್ಪ ಮೊಯ್ಲಿ: ಈಗ ಈ ಸದನದಲ್ಲಿರತಕ್ಕ ಪರಿಪಾಠ ಏನೆಂದರೆ, ಶೂನ್ಯ ವೇಳೆಯನ್ನು ಆದಷ್ಟು ಅವಾಯ್ಡ್ ಮಾಡೋಣವೆಂದು ನಿಯಮ 334ನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ಈ ಸದನದಲ್ಲಿ ನಿಯಮ 334 ಇರಬೇಕು ಮತ್ತು ಶೂನ್ಯವೇಳೆಯೂ ಇರಬೇಕೆಂಡರೆ ನಮ್ಮ ಅಡ್ಡಿ ಏನು ಇಲ್ಲ ಆದರೆ ಆಡನ್ನು ಸಭೆ ನಿರ್ಣಯ ಮಾಡಬೇಕಾಗುತ್ತದೆ. ಶೂನ್ಯವೇಳೆಯನ್ನು ಇಟ್ಟುಕೊಂಡು ನಿಯಮ 334ನ್ನು ಬೇಕಾದರೆ ಬಿಡೋಣ. ಎರಡರಲ್ಲಿ ಒಂದು ತೀರ್ಮಾನವಾಗಬೇಕು. ಶೂನ್ಯವೇಳೆಯನ್ನೇ ಬೇಕಾದರೆ ಇಟ್ಟುಕೊಳ್ಳೋಣ . ಅದು ಸಭೆಗೆ ಬಿಟ್ಟದ್ದು.

ಶ್ರೀ ವಾಟಾಳ್ ನಾಗರಾಜ್: ಶೂನ್ಯ ವೇಳೆಯೂ ಇದೆ, ನಿಯಮ 334 ಇದೆ.

ಅಧ್ಯಕ್ಷರು: ಶೂನ್ಯ ವೇಳೆ ಇಲ್ಲ. 334 ಇದೆ. ಅಷ್ಟೆ ನಿಯಮ 334ರ ಪ್ರಕಾರ ಅಷ್ಟೇ ಕೇಳತಕ್ಕದ್ದು.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಒಂದು ಪತ್ರ ಬರೆದಿದ್ದೆ. ಆಲ್ಲದೆ ತಮ್ಮನ್ನು ಭೇಟಿ ಕೂಡ ಮಾಡಿದ್ದೆ.

ಶ್ರೀ ಹೆಚ್. ಏಕಾಂತಯ್ಯ: ಇವತ್ತಿನ ದಿವಸ ಅರಿವಳಿಕೆ ವೈದ್ಯ ಸಿಬ್ಬಂದಿ ಇಲ್ಲದೆ. ನೂರಾರು ಜನ ರೋಗಿಗಳಿಗೆ ತೊಂದರೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್: ನನ್ನ ಪ್ರಶ್ನೆಯನ್ನು 334ರಲ್ಲಿ ತೆಗೆದುಕೊಳ್ಳಿ.

ಅಧ್ಯಕ್ಷರು: ಅದರಲ್ಲಿ ನಿಮಗೆ ಉತ್ತರ ಬರುವುದಿಲ್ಲ. 334ರ ಪ್ರಕಾರ ಸರ್ಕಾರದ ಗಮನ ಸೆಳೆಯಬಹುದೇ ಹೊರತು ಉತ್ತರ ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ. ಈಗ ನೀವು ಏನಾದರೂ ಹೇಳಿದರೆ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆ. ಕೂಡಲೇ ಉತ್ತರ ಒದಗಿಸಲು ಸಾಧ್ಯವಾಗುವುದಿಲ್ಲ. ಈಗ ಶಿವಕುಮಾರ್‌ರವರು ಮಾತನಾಡಿ.

(ಶ್ರೀ ಡಿ.ಕೆ. ಶಿವಕುಮಾರ್‌ರವರು ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಏಕಕಾಲದಲ್ಲಿ ಮಾತನಾಡತೊಡಗಿದರು.)

ಅಧ್ಯಕ್ಷರು: ನಾನು ಶಿವಕುಮಾರ್‌ರವರನ್ನು ಕರೆದರೆ ನೀವು ಏಕೆ ಮಧ್ಯ ಮಾತನಾಡುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್: ಮೊನ್ನೆ ಪತ್ರಿಕೆಯಲ್ಲಿ ಜನತಾ ದಳದ ಸದಸ್ಯರು ಎಷ್ಟು ಮಂದಿ ಇದ್ದಾರೆಂದು ವರದಿಯಾಗಿದೆ. ಅದರಿಂದ ವಿರೋಧ ಪಕ್ಷದ ನಾಯಕರು ತಮ್ಮ ಸ್ಥಾನವನ್ನು ಕಳೆದುಕೊಂಡಿದ್ದಾರೆಂದು ತಿಳಿದುಬಂದಿದೆ. ಆದರ ಬಗ್ಗೆ ತಮಗೆ ಲಿಖಿತ ಮೂಲಕ ಏನಾದರೂ ಬಂದಿದೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಚಾಮರಾಜನಗರ ತಾಲ್ಲೂಕಿನಲ್ಲಿ ಹರಿಜನಗಿರಿಜನ ವಿದ್ಯಾರ್ಥಿಗಳು ಬೀದಿಗೆ ಹೋಗಿದ್ದಾರೆ.

ಅಧ್ಯಕ್ಷರು : ನೀವು ನೋಟೀಸ್ ಕಳುಹಿಸಿದ್ದೀರಿ. ಅದು ನಿಯಮ 334ಕ್ಕೆ ಮಾರ್ಪಾಡಾಗಿ ಸದನದ ಮುಂದೆ ಬರುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನ ಹೆಸರು ಪ್ರಸ್ತಾಪ ಮಾಡಿದ್ದರಿಂದ ಹೇಳುತ್ತೇನೆ. ಶಿವಕುಮಾರ್‌ರವರು ಹೇಳುತ್ತಿದ್ದಾರೆ. ನಾಯಕತ್ವ ಹೋಗಿದೆ ಎಂದು. ಆ ನಿರ್ಣಯ ಮಾಡುವುದು ನಿಮ್ಮ ಕೈಯಲ್ಲಿ ಇದೆ. ಇಂಥ ಪ್ರಶ್ನೆಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ ಅನ್ನಿಸುತ್ತದೆ.

ಅಧ್ಯಕ್ಷರು:– ಶಿವಕುಮಾರ್‌ರವರೆ, ನೀವು ಪೂರ್ವಭಾವಿಯಾಗಿ ಯಾವ ಸೂಚನೆಯನ್ನು ಕೊಟ್ಟಿಲ್ಲ, ಬರೆದು ಕಳುಹಿಸಿಲ್ಲ; ಭೇಟಿಯನ್ನು ಮಾಡಲಿಲ್ಲ. ಏಕಾಏಕಿಯಾಗಿ ಪ್ರಸ್ತಾಪ ಮಾಡಿದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್: ನಮ್ಮ ಕ್ಷೇತ್ರದಲ್ಲಿ ಜನ ಕೇಳಿದರೆ ಉತ್ತರಿಸಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಏನೂ ಆಗಿಲ್ಲ, ನಾಯಕತ್ವ ಗಟ್ಟಿಯಾಗಿದೆ ಎಂದು ಹೇಳಿ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರ ಸ್ಟೇಟಸ್ಕೋ ಮುಂದುವರಿದಿದೆ; ಯಾರೂ ಏನು ಗಾಬರಿ ಪಡಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಹರಿಜನಗಿರಿಜನ ವಿದ್ಯಾರ್ಥಿಗಳ ಬಗ್ಗೆ ಸರ್ಕಾರ ಬಹಳ ನಿರ್ಲಕ್ಷ್ಯದಿಂದ ಇದೆ. ಇದನ್ನು ನೋಡಿದರೆ ನಾನು ಸಭಾತ್ಯಾಗ ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:– ಸನ್ಮಾನ್ಯ ಅಧ್ಯಕ್ಷರೇ,

ಶ್ರೀ ವಾಟಾಳ್ ನಾಗರಾಜ್:– ಹರಿಜನ ವಿದ್ಯಾರ್ಥಿಗಳನ್ನು ಹೊರಗೆ ಹಾಕಿದ್ದಾರೆ. ಸರ್ಕಾರದ ನಿರ್ಲಕ್ಷ್ಯ ನೀತಿಯನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡಬೇಕಾಗುತ್ತದೆ. ಬೇರೆ ವಿಧಿ ಇಲ್ಲ.

(ಸಭಾ ತ್ಯಾಗ ಮಾಡಲು ತಮ ಸ್ಥಾನದಿಂದ ಎದ್ದು ಸ್ವಲ್ಪ ದೂರ ಹೋಗಿ ಮತ್ತೆ ತಮ್ಮ ಸ್ಥಾನಕ್ಕೆ ಬಂದು ಕುಳಿತರು)

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಹೇಳಿಕೆಗೆ ಮತ್ತು ವರ್ತನೆಗೆ ಸರ್ಕಾರ ತೀವ್ರವಾಗಿ ಪ್ರತಿಭಟನೆ ಮಾಡುತ್ತದೆ. ಯಾವುದಕ್ಕೂ ಕ್ರಮ ಇದೆ. ನಿಯಮ 334ರಲ್ಲಿ ಬೇಕಾದರೆ ಎತ್ತಲಿ. ಹಾಗೆ ಮಾಡದೆ ಸಾರಾಸಗಟಾಗಿ ಎದ್ದುನಿಂತು ಏನೋ ಮಾತಸಾಡಿಕೊಂಡು ಸರ್ಕಾರದ ಮೇಲೆ ಬೇಜವಾಬ್ದಾರಿಯಿಂದ ಹೇಳುವುದು ಸರಿಯಲ್ಲ. ಅವರು ಆ ಕ್ಷೇತ್ರವನ್ನು ಪ್ರತಿನಿಧಿಸತಕ್ಕ ಶಾಸಕರು. ನಾನು ಪ್ರಶ್ನೆ ಮಾಡುತ್ತಿದ್ದೇನೆ, ಸಂಬಂಧಪಟ್ಟ ಸಚಿವರಿಗೆ ಈ ವಿಷಯವನ್ನು ಗಮನಕ್ಕೆ ತಂದಿದ್ದೀರಾ? ತಂದಿದ್ದರೆ ಅದರ ಬಗ್ಗೆ...

ಶ್ರೀ ವಾಟಾಳ್ ನಾಗರಾಜ್ : ತಂದಿದ್ದೇನೆ. ಮಾನ್ಯ ಅಧ್ಯಕ್ಷರ ಗಮನಕ್ಕೂ ತಂದಿದ್ದೇನೆ.

ಶ್ರೀ ವೀರಪ್ಪ ಮೊಯಿಲಿ : ಸದನದಲ್ಲಿ ಎದ್ದುನಿಂತು ಸ್ಥಳೀಯ ಸಮಸ್ಯೆಗಳ ಬಗ್ಗೆ ಎತ್ತಿ ಸರ್ಕಾರವನ್ನು ಸೆನ್‌ಷೋರ್ ಮಾಡತಕ್ಕ ಹೇಳಿಕೆ ಅಷ್ಟು ಜವಾಬ್ದಾರಿಯುತವಾದ ಹೇಳಿಕೆ ಅಲ್ಲ. ಆದ್ದರಿಂದ ಅವರು ನಮ್ಮ ಗಮನಕ್ಕೆ ತಂದಿದ್ದಾರೆ. ವಿಚಾರ ಮಾಡುತ್ತೇವೆ. ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ನಾನು ಮಾನ್ಯ ಸದಸ್ಯರನ್ನು ಕರೆದಿಲ್ಲ. ಆದ್ದರಿಂದ ಅವರು ಹೇಳಿದ ಯಾವ ಮಾತುಗಳೂ ಸದನದ ಕಡತದಲ್ಲಿ ಹೋಗುವುದಿಲ್ಲ. ಆದ್ದರಿಂದ ಅದನ್ನು ತೀವ್ರವಾಗಿ ಪ್ರತಿಭಟಿಸಬೇಕಾದ ಅವಶ್ಯಕತೆ ಕೂಡ ಇಲ್ಲ. ಈಗ ಬೈರೇಗೌಡರು ಮಾತನಾಡಲಿ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಸಭಾ ತ್ಯಾಗ ಮಾಡಿದರು)

ಗಮನ ಸೆಳೆಯುವ ಸೂಚನೆಗಳು

ಹಾಲಿನ ಬೆಲೆಯನ್ನು ಏರಿಸದೆ ಇರುವುದರಿಂದ ಹಾಲು ಉತ್ಪಾದಕರಿಗೆ ತೊಂದರೆ ಉಂಟಾಗಿರುವುದು.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವರ್ಷಕ್ಕೂ ಮೇಲ್ಪಟ್ಟು ರಾಜ್ಯದಲ್ಲಿ ಮತ್ತು ದೇಶದಲ್ಲಿ ಎಲ್ಲಾ ಪದಾರ್ಥಗಳ ಬೆಲೆ ಜಾಸ್ತಿಯಾಗಿದೆ. ಆದರೆ ವ್ಯವಸಾಯ ರಂಗದಲ್ಲಿ ಅದರಲ್ಲೂ ಪ್ರಮುಖವಾಗಿ ಹಾಲಿನ ಬೆಲೆಯನ್ನು ಸರ್ಕಾರ ಸರಿಯಾಗಿ ನಿಗದಿ ಮಾಡಿಲ್ಲ ಅಥವಾ ಹಾಲು ಮಾರಾಟ ಮಹಾ ಮಂಡಲಿ ಏನಿದೆ ಅದು ರಾಜ್ಯದಲ್ಲಿ ಹಾಲಿನ ಉತ್ಪಾದನೆ ಹೆಚ್ಚಿಸತಕ್ಕ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ಲಕ್ಷಾಂತರ ಜನ ಉತ್ಪಾದಕರಿಗೆ ನಷ್ಟವಾಗಿ ಹಸುಗಳನ್ನು ಎಮ್ಮೆಗಳನ್ನು ಡಿಸ್ಪೈಸ್ ಸೇಲ್ ಮಾಡುತ್ತಿದ್ದಾರೆ. ಇದರಿಂದ ಸಣ್ಣ ರೇತರಿಗೆ ಅತಿ ಸಣ್ಣ ರೈತರಿಗೆ ಮತ್ತು ರೈತರಿಗೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತದೆ. ಸರ್ಕಾರ ಈ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಇದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ.

† **ಶ್ರೀ ಬಿ. ಬಸವಲಿಂಗಪ್ಪ** (ಗ್ರಾಮೀಣಾಭಿವೃದ್ಧಿ ಮತ್ತು ಪಶುಸಂಗೋಪನಾ ಸಚಿವರು):– ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿಯು ರಾಜ್ಯ ಮಟ್ಟದ ಸಂಸ್ಥೆಯಾಗಿದ್ದು, 13 ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಇವುಗಳು ಸ್ವಾಯತ್ತ ಸಂಸ್ಥೆಯಾಗಿರುತ್ತದೆ.

ಹಾಲು ಶೇಖರಣೆ ಮತ್ತು ಮಾರಾಟ ದರ ಹೆಚ್ಚಳ ಮಾಡುವಾಗ ಈ ಕೆಳಕಂಡ ಪದ್ಧತಿಯನ್ನು ಅನುಸರಿಸಲಾಗುತ್ತಿದೆ.

ಈ ಸಂಬಂಧ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಿ ಅದರ ತೀರ್ಮಾನವನ್ನು ಮಹಾ ಮಂಡಳಿಯ ಕಾರ್ಯ ನಿರೂಪಣಾ ಸಮಿತಿ ಸಭೆಗೆ ಕಳುಹಿಸಲಾಗುವುದು. ಕಾರ್ಯ ನಿರೂಪಣಾ ಸಮಿತಿ ಸಭೆಯಲ್ಲಿ ಒಕ್ಕೂಟಗಳಿಂದ ಬಂದಿರುವ ಪ್ರಸ್ತಾವನೆಯನ್ನು ಚರ್ಚಿಸಿ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಮಹಾ ಮಂಡಳಿಯ ಆಡಳಿತ ಮಂಡಳಿ ಸಭೆಗೆ ಶಿಫಾರಸ್ಸು ಮಾಡಲಾಗುವುದು. ಈ ವಿಷಯದಲ್ಲಿ ಅಂತಿಮ ತೀರ್ಮಾನವನ್ನು ಕರ್ನಾಟಕ ಹಾಲು ಮಹಾ ಮಂಡಳಿಯ ಆಡಳಿತ ಮಂಡಳಿ ತೆಗೆದುಕೊಳ್ಳುವುದು. ಪ್ರಸ್ತುತ ಮೇಲ್ಕಂಡ ಪದ್ಧತಿಯನ್ನು ಅನುಸರಿಸಲಾಗುತ್ತಿದೆ.